**OS** 46/2015

**<u>ದಿನಾಂಕಃ 05.11.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಡಿ ಎಂ ಎಸ್ ವಕೀಲರಿಂದಃ</u>**

ನನ್ನ ತಂದೆ ವಿ ರಾಮಯ್ಯ ರವರು 2018 ರಲ್ಲಿ ಮೃತಪಟ್ಟಿರುತ್ತಾರೆ. ನನ್ನ ತಂದೆ ಮೃತಪಡುವ ಪೂರ್ವದಲ್ಲಿ ಅನಾರೋಗ್ಯಕ್ಕೆ ಒಳಗಾಗಿದ್ದರು ಎಂದರೆ ಸರಿ. ನನ್ನ ತಂದೆ ಮರಣ ಹೊಂದುವ ಪೂರ್ವದ 2 ವರ್ಷದಿಂದ ಅನಾರೋಗ್ಯಕ್ಕೆ ಒಳಗಾಗಿದ್ದರು. ನೋಂದಾಯಿತ ದಾನ ಪತ್ರದಲ್ಲಿರುವ 2 ನೇ ಸಾಕ್ಷಿದಾರ ಮನೀಶ್ ನನ್ನ ಮಗ ಎಂದರೆ ಸರಿ. 1 ನೇ ಸಾಕ್ಷಿದಾರ ಸಿ ಎನ್ ನಂಜುಂಡಯ್ಯ ನನ್ನ ದೂರದ ಸಂಬಂಧಿ. ದಾನ ಪತ್ರ ಬರೆಯಲು ದಾಖಲೆಗಳನ್ನು ನಾನೇ ನೀಡಿದ್ದೆ

ಎಂದರೆ ಸಾಕ್ಷಿಯು ನನ್ನ ತಂದೆಯೇ ದಾಖಲಾತಿಗಳನ್ನು ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಕಾಚಕ್ಕಿ ಮಾದಯ್ಯರವರ ಹೆಸರಿನಲ್ಲಿದ್ದ ಖಾತೆಯು ನನ್ನ ತಾತ ವರದಯ್ಯನವರ ಹೆಸರಿಗೆ ಖಾತೆ ಬದಲಾವಣೆ ಆದ ಬಗ್ಗೆ mutation register ಇದೆಯೋ ಇಲ್ಲವೋ ಎಂಬ ಪ್ರಶ್ನೆಗೆ ಸಾಕ್ಷಿಯು ಸರ್ವೇ ನಂಬರ್ 100/1ಬಿ ರ ಜಮೀನು ನನ್ನ ತಾತ ವರದಯ್ಯನವರಿಂದ ನಮಗೆ ಬಂದಿದೆ ಎಂದು ನುಡಿಯುತ್ತಾರೆ. ನನ್ನ ಹೆಂಡತಿ ನಮಿತ ಎಂ ಸಿ ರವರು ಚಾಮರಾಜನಗರಕ್ಕೆ ಬಂದು ಹೋಗುತ್ತಾರೆ ಎಂದರೆ ಸರಿ.

ನಿಡಿ 1 ರ ದಾನ ಪತ್ರದಲ್ಲಿ ನನ್ನ ತಂದೆ ವಿ ರಾಮಯ್ಯರವರು ಮಾಲೀಕರು ಎಂಬ ಬಗ್ಗೆ ಉಲ್ಲೇಖ ಇಲ್ಲ ಎಂದರೆ ಸಾಕ್ಷಿಯು ಪಿತ್ರಾರ್ಜಿತ ಆಸ್ತಿಯಾದ್ದರಿಂದ ಸದರಿ ಉಲ್ಲೇಖದ ಅವಶ್ಯಕತೆ ಇಲ್ಲ ಎಂದು ನುಡಿಯುತ್ತಾರೆ. ಸರ್ವೇ ನಂಬರ್ 79 ರಲ್ಲಿ 4 ಎಕರೆ 38 ಗುಂಟೆ ಜಮೀನು ನಮ್ಮ ಕುಟುಂಬಕ್ಕೆ ಸೇರಿದ್ದು ಎಂದರೆ ಸರಿ. ಸರ್ವೇ ನಂಬರ್ 79 ರ ಜಮೀನಿನ ಪೂರ್ವಕ್ಕೆ ಸರ್ವೇ ನಂಬರ್ 100/1ಬಿ ಜಮೀನು ಬರುತ್ತದೆ. ಸರ್ವೇ ನಂಬರ್ 79 ರ ಜಮೀನಿಗೆ ಸಂಬಂಧಿಸಿದಂತೆ ದಿಃ 10.05.1932 ರ ನೋಂದಾಯಿತ ಆಧಾರ ಪತ್ರದಲ್ಲಿ ಸರ್ವೇ ನಂಬರ್ 79 ರ ಪೂರ್ವಕ್ಕೆ ಕಾಚಕ್ಕಿ ಮಾದಯ್ಯನ ಜಮೀನುಗಳು ಎಂದು ನಮೂದಾಗಿವೆ ಎಂದರೆ ಸಾಕ್ಷಿಯು ತಪ್ಪಾಗಿ ನಮೂದಿಸಿರುತ್ತಾರೆ ಎಂದು ನುಡಿಯುತ್ತಾರೆ. ಕುರಿಮಾದನ ಮಗ ಮಾದ ಉಃ ಬೆಳ್ಳ ನನಗೆ ಏನಾಗಬೇಕೆಂದು ನನಗೆ ಗೊತ್ತಿಲ್ಲ. ಸುಮಾರು 40 ವರ್ಷಗಳಿಂದ ನಾನು ಊರಿನಲ್ಲಿ ಇಲ್ಲ ಎಂದರೆ ಸಾಕ್ಷಿಯು 20 ವರ್ಷಗಳಿಂದ ಊರಿನಲ್ಲಿ ಇರುತ್ತೇನೆ ಎಂದು ನುಡಿಯುತ್ತಾರೆ. ದಾವಾ ಜಮೀನುಗಳು ಸರ್ಕಾರದಿಂದ ವಾದಿಯರ ಮುತ್ತಾತ ಕುಂಟಮಾದರವರಿಗೆ ಮಂಜೂರದ ಜಮೀನುಗಳು ಎಂದರೆ ಸರಿಯಲ್ಲ. ದಾವಾ ಜಮೀನುಗಳ ಕಂದಾಯ ದಾಖಲಾತಿಗಳಲ್ಲಿ ಕುಂಟಮಾದರವರ ಹೆಸರು ಮತ್ತು ಅವರ ಮಗ ಕಾಚಕ್ಕಿ ಮಾದರವರ ಹೆಸರು ನಮೂದಾಗಿದೆ ಎಂದರೆ ಸರಿಯಲ್ಲ.

ನಿಡಿ 1 ರ ದಾನ ಪತ್ರ ನೋಂದಣಿ ಆಗುವ ಸಮಯದಲ್ಲಿ ನಿರ್ಬಂಧಕಾಜ್ಞೆ ಆದೇಶ ಜಾರಿಯಲ್ಲಿತ್ತು ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ವಾದಿಯರ ಮಾಲಿಕತ್ವಕ್ಕೆ ಮತ್ತು ಸ್ವಾಧೀನಕ್ಕೆ ಸೇರಿರುತ್ತವೆ ಎಂದರೆ ಸರಿಯಲ್ಲ. ಸಾಕ್ಷಿ

ಮುಂದುವರೆದು ನಮ್ಮ ಕುಟುಂಬವೇ ಬೇರೆ ವಾದಿಯರ ಕುಟುಂಬವೇ ಬೇರೆ ಎಂದು ನುಡಿಯುತ್ತಾರೆ. ನಿಡಿ 1 ರ ನೋಂದಾಯಿತ ದಾನ ಪತ್ರವನ್ನು ಹೊರತುಪಡಿಸಿ ದಾವಾ ಆಸ್ತಿಗಳಿಗೆ ಸಂಬಂಧಿಸಿದಂತೆ ಯಾವುದೇ ನೋಂದಾಯಿತ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ದಾವಾ ಆಸ್ತಿಗಳು ನಮ್ಮ ಪಿತ್ರಾರ್ಜಿತ ಆಸ್ತಿಗಳಾಗಿರುವುದರಿಂದ ಬೇರೆ ನೋಂದಾಯಿತ ದಾಖಲೆಗಳು ಇಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಗಳು ನಮ್ಮ ಪಿತ್ರಾರ್ಜಿತ ಆಸ್ತಿಗಳಲ್ಲ ಮತ್ತು ದಾವಾ ಆಸ್ತಿಗಳ ಮೇಲೆ ನಮಗೆ ಯಾವುದೇ ಹಕ್ಕು ಬಾಧ್ಯತೆ ಇಲ್ಲ ಎಂದರೆ ಸರಿಯಲ್ಲ. ನಿಡಿ 1 ರ ನೋಂದಾಯಿತ ದಾನ ಪತ್ರವನ್ನು ಬರೆಯಲು ನನ್ನ ತಂದೆಗೆ ಯಾವುದೇ ಹಕ್ಕು ಮತ್ತು ಹಿತಾಸಕ್ತಿ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ಹೆಂಡತಿಯ ಪರವಾಗಿ ಸಾಕ್ಷಿ ನುಡಿಯಲು ನನಗೆ ನನ್ನ ಹೆಂಡತಿ ಅಧಿಕಾರ ಪತ್ರವನ್ನು ನೀಡಿಲ್ಲ ಎಂದರೆ ಸಾಕ್ಷಿಯು ನಾನು ಸಹ ಈ ದಾವೆಯಲ್ಲಿ ಪಕ್ಷಗಾರನಾಗಿರುತ್ತೇನೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಗಳ ಸ್ವಾಧೀನವನ್ನು ವಾದಿಯರ ಕುಟುಂಬದವರು ನಮ್ಮ ಕುಟುಂಬದವರಿಗೆ ನೀಡಿರುವ ಬಗ್ಗೆ ಯಾವುದೇ ದಾಖಲಾತಿಗಳು ಇಲ್ಲ ಎಂದರೆ ಸಾಕ್ಷಿಯು ದಾವಾ ಆಸ್ತಿಗಳು ನಮ್ಮ ಪಿತ್ರಾರ್ಜಿತ ಆಸ್ತಿಗಳು ಎಂದು ನುಡಿಯುತ್ತಾರೆ. ನಾವು ಹಾಜರುಪಡಿಸಿರುವ ಪಹಣಿ ಪತ್ರಿಕೆಗಳಲ್ಲಿ ಬೆಳೆ ನಮೂದಾಗಿಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ಎಲ್ಲಾ ದಾಖಲಾತಿಗಳು ಸೃಷ್ಟಿ ಮಾಡಿದ ದಾಖಲಾತಿಗಳು ಎಂದರೆ ಸರಿಯಲ್ಲ. ನಾವು ವಾದಿಯರ ಸ್ವಾಧೀನಕ್ಕೆ ತೊಂದರೆ ನೀಡಿದ್ದೇವೆ ಎಂದರೆ ಸಾಕ್ಷಿಯು ನಾವೇ ಸ್ವಾಧೀನದಲ್ಲಿ ಇದ್ದೇವೆ ಎಂದು ನುಡಿಯುತ್ತಾರೆ. ವಾದಿಯರೇ ದಾವಾ ಆಸ್ತಿಗಳಲ್ಲಿ ಸ್ವಾಧೀನದಲ್ಲಿ ಇದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರ ಮತ್ತು ಪ್ರತಿವಾದ ಪತ್ರದಲ್ಲಿ ನಮೂದಿಸಿರುವ ಎಲ್ಲಾ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ. ವಾದಿಯರೇ ದಾವಾ ಆಸ್ತಿಗಳ ಮಾಲೀಕರಾಗಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸರಿ ಇದೆ

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಾಮರಾಜನಗರ.